ಜನರಿಗೆ ಈಗಾಗಲೇ ಪುನರ್ವಸತಿ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ. ಸಾಧಾರಣ ಮಾರ್ಚ್ ೧೯೮೮ರ ತನಕ ೧೯ ಕೋಟಿ ೮೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಪಾಕ್ಸಿವಮ್ ಸಬ್ಸಿಡಿ ೬೨೫೦ ಕೊಡುತ್ತೇವೆ. ಇನ್ನೂ ೧೧,೪೪೦ ಜನರಿಗೆ ರೀಹೆಬಿಲಿಟೇಟ್ ಮಾಡಬೇಕಾಗಿದೆ, ಆದಷ್ಟು ಬೇಗನೆ ಮಾಡುವಂಥ ಕಾರ್ಯಕ್ರಮ ಸರ್ಕಾರ ಹಾಕಿ ಕೊಂಡಿದೆ.

ಶ್ರೀ ಜೆ. ರಾಜಂಗೌಡ.—ಈ ಪ್ರಶ್ನೆಯನ್ನು ಕೇಳಿರತಕ್ಕಂಥ ಮೂಲ ಉದ್ದೇಶ ಏನೆಂದರೆ, ನೀವು ಆಸ್ತಿಗಳನ್ನು ವಿತರಣೆ ಮಾಡುತ್ತೀರಿ, ಈ ರೀತಿ ವಿತರಣೆ ಮಾಡುವುದರಲ್ಲಿ ಅನೇಕ ರೀತಿಯಿಂದ ದುರುಪಯೋಗವಾಗುತ್ತಿದೆ. ದಯವಿಟ್ಟು, ನನ್ನ ಸಲಹೆ ಪ್ರಕಾರ ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ತಾವು ದಯವಿಟ್ಟು ಈ ೧೧ ಸಾವಿರ ಜನಕ್ಕೆ ಏನು ಕೊಡಬೇಕು, ಅದರಲ್ಲಿ ಖಾಯಂ ಆದಾಯ ಬರತಕ್ಕಂಥ ಆಸ್ತಿಯನ್ನು ತಾವು ವಿತರಣೆ ಮಾಡುವಾಗ ಏನು ಸಿ ಆಂಡ್ ಡಿ ಲ್ಯಾಂಡ್‌ನ್ನು ತೆಗೆದು ಈ ಜೀತ ವಿಮುಕ್ತರಿಗೆ ಕೊಟ್ಟು ನೀರಾವರಿ ಬಾವಿ ಮಾಡಿ, ತನ್ಮೂಲಕ ಆದಾಯ ಬರತಕ್ಕಂಥ ವ್ಯವಸ್ಥೆ ಮಾಡಿದಾಗ ದುರುಪಯೋಗವಾಗುವುದು ತಪ್ಪುತ್ತದೆ. ಅದು ಬಿಟ್ಟು, ಕಾರಿ, ಕೋಳಿ ತೆಗೆದುಕೊಂಡಾಗ, ಎಲ್ಲಾ ಅಧಿಕಾರಿಗಳಿಗೆ ಆರ್ಥ ಆಗುತ್ತದೆ, ಜನಗಳಿಗೆ ಏನೂ ಸಿಕ್ಕುವುದಿಲ್ಲ, ನೀವು ಕೊಡುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ದಯವಿಟ್ಟು ನನ್ನ ಸಲಹೆ ಪ್ರಕಾರ ಕಾರ್ಯಗತ ಮಾಡುತ್ತೀರಾ ?

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರೇ, ಈ ಕಾರ್ಯಕ್ರಮ ಗವರ್ನಮೆಂಟ್ ಆಫ್ ಇಂಡಿಯಾ ಗೈಡ್‌ಲೈನ್ಸ್ ಪ್ರಕಾರ ಇಂಪ್ಲಿಮೆಂಟ್ ಮಾಡಿದ್ದೇನೆ. ಇಲ್ಲಿ ಕೇಂದ್ರಸರ್ಕಾರ ೫೦ ಪರ್ಸೆಂಟ್ ಸಬ್ಸಿಡಿ, ರಾಜ್ಯಸರ್ಕಾರದ ೫೦ ಪರ್ಸೆಂಟ್ ಕೊಡುತ್ತದೆ. ಇದರಲ್ಲಿ ಏನಾದರೂ ಹೆಚ್ಚುಕಡಿಮೆ ಪ್ರೋಗ್ರಾಂನಲ್ಲಿ ಮತ್ತು ಬಿಸಿನೆಸ್ ಇಂಡಸ್ಟ್ರಿ ಸರ್ವೀಸ್‌ನಲ್ಲಿ ಬ್ಯಾಂಡೆಡ್ ಲೇಬರ್ಸ್‌ಗೆ ಸಹಾಯ ಮಾಡಬೇಕೆಂದು ಕಾರ್ಯಕ್ರಮ ಇದೆ. ಇದರಲ್ಲಿ ಲ್ಯಾಂಡ್ ಇದ್ದರೆ, ಲ್ಯಾಂಡ್ ಕೊಡಬೇಕಾಗುತ್ತದೆ, ಹೌಸ್ ಸೈಟು ಇದ್ದರೆ, ಹೌಸ್ ಸೈಟು ಕೊಡಬೇಕಾಗುತ್ತದೆ. ಮನೆ ಇದ್ದರೆ, ಮನೆ ಕೊಡಬೇಕಾಗುತ್ತದೆ. ಅಪರ ಬಡತನ ರೇಖೆ ಏನಿದೆ ೬೪೮೦ ರೂಪಾಯಿಗಳು. ಈ ರೇಖೆ ಮೇಲೆ ಬರುವಹಾಗೆ ಸಹಾಯ ಮಾಡಬೇಕಾಗುತ್ತದೆ. ಆದರೂ ಮಾನ್ಯ ಸದಸ್ಯರು ಏನು ಸೂಚನೆ ಮಾಡಿದ್ದಾರೆ, ಆ ಸೂಚನೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮಸೀದಿಗಳ ದುರಸ್ತಿ

೧೫೮೭. ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೬-೮೭, ೧೯೮೭-೮೮ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮಸೀದಿಗಳ ದುರಸ್ತಿ ಮತ್ತು ಕಟ್ಟಡಕ್ಕಾಗಿ ವಕ್ಫ್ ಮಂಡಳಿಯಿಂದ ಎಷ್ಟು ಹಣ ಕೊಡಲಾಗಿದೆ ?

ಆ) ನೆರವಿಗಾಗಿ ಬಂದ ಅರ್ಜಿಗಳಲ್ಲಿ ವಿಲೇವಾರಿಯಾಗಿರುವ ಮತ್ತು ಬಾಕಿಯಿರುವ ಅರ್ಜಿಗಳೆಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಹಾಗೂ ಪಶುಸಂಗೋಪನಾ ಮಂತ್ರಿಗಳು).—

ಅ) ೧೯೮೬-೮೭ ರೂ. ೩,೬೦,೦೦೦-೦೦

೧೯೮೭-೮೮ ರೂ. ೨.೨೯,೦೦೦-೦೦

		೧೯೮೬–೮೭	
೬)	ಸ್ವೀಕರಿಸಲಾದ ಅರ್ಜಿಗಳು	—	೫೭
	ಮಂಜೂರಾದ ಅರ್ಜಿಗಳು	—	೩೨
	ಬಾಕಿ	—	೨೫

	೧೯೮೭–೮೮	
ಸ್ವೀಕರಿಸಲಾದ ಅರ್ಜಿಗಳು	—	೮೪
ಮಂಜೂರಾದ ಅರ್ಜಿಗಳು	—	೪೦
ಬಾಕಿ		೪೪

ಶ್ರೀ ಬಿ. ಎಂ ಇದಿನಬ್ಬ (ಉಳ್ಳಾಲ) —ಸನ್ಮಾನ್ಯ ಅಧ್ಯಕ್ಷರೇ, ಈ ವಕ್ಫ್ ಮಂಡಲಿಯಿಂದ ಮಸೀದಿ ರಿಪೇರಿಗೆ ಕೊಡುವಂಥ ಹಣದಲ್ಲಿ ೧೯೮೬–೮೭ರಲ್ಲಿ ೩ ಲಕ್ಷ ೬೦ ಸಾವಿರ ಕೊಟ್ಟಿದ್ದೀರಿ, ೧೯೮೭–೮೮ರಲ್ಲಿ ೨ ಲಕ್ಷ ೩೫ ಸಾವಿರ ಕೊಟ್ಟಿದ್ದೀರಿ, ಅಂದರೆ ಒಂದೂ ಲಕ್ಷ ಚಿಲ್ಲರೆ ಕಡಿಮೆಯಾಗಿದೆ. ಈ ರೀತಿ ಕಡಿಮೆಯಾಗುವುದಕ್ಕೆ ಕಾರಣ ಏನು? ಮಾತ್ರವಲ್ಲ, ೧೯೮೬-೮೭ ರಲ್ಲಿ ಬರೀ ೫೫ ಅರ್ಜಿಗಳು ಬಂದಿದ್ದರೆ, ಅದರಲ್ಲಿ ೩೦ ಅರ್ಜಿಗಳಿಗೆ ಮಾತ್ರ ಕೊಟ್ಟು ಉಳಿದ ೨೫ ಅರ್ಜಿಗಳನ್ನು ಹಾಗೆಯೇ ಇಟ್ಟಿದ್ದೀರಿ. ಇದೇರೀತಿಯಲ್ಲಿ ೧೯೮೭–೮೮ರಲ್ಲಿ ೮೪ ಅರ್ಜಿಗಳು ಬಂದಿದ್ದು ಇದರಲ್ಲಿ ೪೦ ಅರ್ಜಿಗಳನ್ನು ಹಾಗೆಯೇ ಇಟ್ಟಿದ್ದೀರಿ. ಹೀಗೆ ಮಾಡುವುದಕ್ಕೆ ಕಾರಣ ಏನು ಎನ್ನುವುದನ್ನು ಕೇಳುತ್ತೇನೆ.

ಶ್ರೀ ಮಹಮದ್ ಮೊಯಿನುದ್ದೀನ್,—ನಮಗೆ ೩ ಲಕ್ಷ ೬೦ ಸಾವಿರ ಸ್ಯಾಂಕ್ಷನ್ ಆಗಿದ್ದು, ೩೨ ಸಂಸ್ಥೆಗಳಿಗೆ ಕೊಡಲಾಗಿದೆ. ೨ ಲಕ್ಷ ೩೫ ಸಾವಿರ ರೂಪಾಯಿಗಳನ್ನು ೨೯ ಮಸೀದಿಗಳಿಗೆ ರಿಪೇರಿಗೆ ಕೊಡಲಾಗಿದೆ. ೧ ಲಕ್ಷ ೨೫ ಸಾವಿರ ರೂಪಾಯಿಗಳನ್ನು ಇನ್ನೊಂದು ೪ ಸಂಸ್ಥೆಗಳಿಗೆ ಕೊಡಲಾಗಿದೆ. ಆದಷ್ಟು ಹಣದ ಪರಿಮಿತಿಯಲ್ಲಿ ಎಷ್ಟು ಮಸೀದಿಗಳಿಗೆ ಎಷ್ಟು ರಿಕ್ವೈರ್‌ಮೆಂಟ್ ಇದೆ ಎಂಬುದನ್ನು ಆಡ್ರೆಸ್ ಮಾಡಿ, ನಮ್ಮ ಹತ್ತಿರ ಎಷ್ಟು ಹಣ ಇದೆ ಎಂಬುದನ್ನು ನೋಡಿ ಕೊಟ್ಟಿದ್ದೇವೆ.

ಶ್ರೀ ಬಿ. ಎಂ. ಇದಿನಬ್ಬ — ಮಾನ್ಯ ಅಧ್ಯಕ್ಷರೇ, ಅಲ್ಪಸಂಖ್ಯಾತರ ವಿಭಾಗದಲ್ಲಿ ಈ ವಕ್ಫ್ ಇಲಾಖೆ ಇದೆ. ನಾವು ಬೇರೆ ಏನೂ ಕೇಳಂವದಿಲ್ಲ. ಇಷ್ಟು ಕೇಳಿದರೂ ಕೊಡುವುದಕ್ಕೆ ನಿಮಗೆ ಸಾಧ್ಯವಿಲ್ಲ ಎಂದು ಹೇಳಿದರೆ ಬಹಳ ಆಶ್ಚರ್ಯ. ಬಂಟ್ವಾಳ ಕ್ಷೇತ್ರದಲ್ಲಿ ಉಗ್ರಾಣದ ಮಸೀದಿಗೆ ೧೦ ಸಾವಿರ ಸ್ಯಾಂಕ್ಷನ್ ಮಾಡಿ, ಬರೀ ೫ ಸಾವಿರ ಕೊಟ್ಟಿದ್ದೀರಿ. ಬಾಂದರ್‌ಕಲ್ಲಂ ಎಂಬಲ್ಲಿ ೧೦ ಸಾವಿರ ಸ್ಯಾಂಕ್ಷನ್ ಮಾಡಿ,೫ ಸಾವಿರ ಕೊಟ್ಟಿದ್ದೀರಿ. ೫ ಸಾವಿರ ಬಾಕಿ ಇದೇ ರೀತಿಯಲ್ಲಿ ಪುತ್ತೂರಿನಲ್ಲಿ ಬಲನಾಡು ಉಜಿರಬಾವಿ ಎಂಬಲ್ಲಿ ಹಣವನ್ನೇ ಕೊಡಲಿಲ್ಲ ನನ್ನ ಕ್ಷೇತ್ರವಾದ ಉಳ್ಳಾಲದಲ್ಲೂ ಕೂಡ, ಎರಡು ಕಡೆಗಳಿಗೆ ಹಣವನ್ನು ಸಂಪೂರ್ಣವಾಗಿ ಕೊಟ್ಟಿಲ್ಲ ಈ ರೀತಿ ಮಾಡಿದರೆ, ನಿಜವಾಗಿಯೂ ಇದು ಎಷ್ಟೊಂದು ಬೇಸರದ ವಿಚಾರ, ಇದರ ಬಗ್ಗೆ ಏನು ಮಾಡುತ್ತೀರಿ ಎಂದು ಕೇಳುತ್ತೇನೆ

ಶ್ರೀ ಮಹಮದ್ ಮೊಯಿನುದ್ದೀನ್ —೬೦ ಲಕ್ಷ ರೂಪಾಯಿ ಪೂರ್ತಿ ಇಡೀ ರಾಜ್ಯಕ್ಕೆ ಸ್ಯಾಂಕ್ಷನ್ ಆಗಿರುವುದು. ಇದರಲ್ಲಿ ಸೌತ್ ಕೆನರಾ ಡಿಸ್ಟ್ರಿಕ್ಟ್‌ನಲ್ಲಿ ಕೊಟ್ಟಿದ್ದು ಈಗಾಗಲೇ ಎಷ್ಟು ವಕ್ಫ್ ಡಿಸ್ಟ್ರಿಬ್ಯೂಷನ್ ಇವೆ, ಅಷ್ಟಕ್ಕೆ ಯಾವರೀತಿ ಕೊಡಬೇಕೋ, ಆ ರೀತಿ ಕೊಡಲಾಗಿದೆ, ಉಳಿದ ಅರ್ಜಿಗಳಿಗೆ ೧೯೮೮-೮೯ರಲ್ಲಿ ನಾವು ಪರಿಹಾರ ತೆಗೆದುಕೊಂಡು ಸ್ಯಾಂಕ್ಷನ್ ಮಾಡಲಾಗುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ಗೈರುಹಾಜರಿಯಲ್ಲಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಈ ವರ್ಷವೂ ಪುನಃ ಅರ್ಜಿಗಳು ಬರುತ್ತವೆ, ಹಿಂದಿನ ಅರ್ಜಿಗಳಿಗೆ ಕೊಡುತ್ತೇವೆಂದು ಹೇಳಿದರೆ ಸರಿಬೀಳುವುದಿಲ್ಲ. ಬಂದ ಅರ್ಜಿಗಳನ್ನು ಬಿಟ್ಟುಬಿಡುತ್ತೀರೋ, ಬರೀ ಹೊಸ ಅರ್ಜಿಗಳು ಬಂದಿರುವುದು, ಮತ್ತೊಮ್ಮೆ ಉಳಿ ಬಂದಿವೆ, ಏನೂ ೫೦೦, ೧೦೦೦ ಬಂದಿರುವುದಿಲ್ಲ. ಇಡೀ ರಾಜ್ಯದಲ್ಲಿ ಅಥವಾ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೀಗಿರುವಾಗ. ವಕ್ಫ್ ಇಲಾಖೆ ನಿದ್ರೆ ಮಾಡುತ್ತಾ ಉಂಟು ಎಂದು ಕೇಳುತ್ತೇನೆ, ಸ್ವಲ್ಪ ಚುರುಕಾಗಬೇಕು. ತಾವು ಆ ರೀತಿ ಮಾಡಬೇಕು.

ಶ್ರೀ ಮಹಮದ್ ಮೊಯಿನುದ್ದೀನ್.—ಗೈರುಹಾಜರಿಯಲ್ಲಿ ಇನ್ನೂ ಅರ್ಜಿಗಳು ಬಂದರೂ ಸಹ ಹಾಲಿ ಇರತಕ್ಕಂಥ ಅರ್ಜಿಗಳನ್ನು ಪರಿಶೀಲನೆ ಮಾಡಿ ಸಹಾಯ ಮಾಡುತ್ತೇವೆ.

ಶ್ರೀ ಆರ್. ಎನ್. ನಾಯಕ್.—ವಕ್ಫ್ ಇಲಾಖೆಗೆ ಸ್ವಲ್ಪ ದುಡ್ಡು ಜಾಸ್ತಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ.

(ಗೊಂದಲ)

ಅಧ್ಯಕ್ಷರು.—ನಾಯಕ್‌ರವರೇ ಸಪ್ಲಿಮೆಂಟರಿ ಪ್ರಶ್ನೆಗಳಿಗೆ ಅವಕಾಶ ಇಲ್ಲ ಎಂದು ನಾನಾಗಲೇ ಹೇಳಿದ್ದೇನೆ.

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ವಕ್ಫ್ ಇಲಾಖೆಗೆ ಜಾಸ್ತಿ ದುಡ್ಡು ತೆಗೆದು ಕೊಳ್ಳುವುದಕ್ಕೆ ನೀವು ಪ್ರಯತ್ನ ಮಾಡಿಲ್ಲ....

(ಗೊಂದಲ)

ಅಧ್ಯಕ್ಷರು.—ನಾಯಕರೇ ನಿಮಗೆ ಎಷ್ಟು ಸಲ ಹೇಳುವುದು, ಬೇರೆಯವರ ಪ್ರಶ್ನೆಗೆ ನೀವು ಉಪಪ್ರಶ್ನೆ ಏತಕ್ಕೆ ಹಾಕುತ್ತೀರಿ If you are not satisfied with the reply of the Hon. Minister only remedy is to put the Half an Hour notice.

(ಗೊಂದಲ)

ಅಧ್ಯಕ್ಷರು.—ಆಗುವುದಿಲ್ಲ ದಯವಿಟ್ಟು ಕುಳಿತುಕೊಳ್ಳಿ. Nothing will be recorded

(ಗೊಂದಲ)

ಅಧ್ಯಕ್ಷರು.—ತಾವೂ ಮೂವರೂ ದಯವಿಟ್ಟು ಕುಳಿತುಕೊಳ್ಳಿ ಪ್ರಶ್ನೋತ್ತರ ವೇಳೆ ಮುಗಿದು ಬಹಳ ಹೊತ್ತಾಯಿತು. Nothing will be recorded. ಇದಿನಬ್ಬರವರಿಗೆ ಮೂರು ಸಲ ಅವಕಾಶ ಕೊಟ್ಟಿದ್ದೇನೆ, ಅವರು ಕೇಳಿದ್ದಾರೆ. ಶಿವನಂಜಪ್ಪನವರೇ ನಿಮ್ಮ ಪ್ರಶ್ನೆ ಕೇಳಿ.

(ಗೊಂದಲ)

ಅಧ್ಯಕ್ಷರು.—ಪ್ರಶ್ನೆಗಳ ಮೇಲೆ ಕೊಟ್ಟಂಥ ಉತ್ತರದಿಂದ ನಿಮಗೆ ತೃಪ್ತಿ ಆಗಲಿಲ್ಲ ಎಂದರೆ ಅರ್ಧಗಂಟೆ ಕಾಲಾವಧಿ ಚರ್ಚೆಗೆ ಹಾಕಬೇಕೆಂದು ರೂಲ್ಸ್ ಇದೆ. ಪ್ರಶ್ನೆ ಲ್ಯಾಪ್ಸ್ ಮಾಡುವುದು ಬೇಡ ಎಂದು ಮೂರು ಅವಕಾಶ ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ. Nothing will be recorded.

ಶ್ರೀ ಬಿ. ಎಂ. ಇದಿನಬ್ಬ.—ಅಧ್ಯಕ್ಷರೇ ನಾನು ಇದರ ಮೇಲೆ ಹಾಫ್ ಅನ್ ಅವರ್ ಡಿಸ್ಕಷನ್‌ಗೆ ಹಾಕುತ್ತೇನೆ.

ಅಧ್ಯಕ್ಷರು.—ಅಯಿತು ನೋಟೀಸ್ ಕೊಡಿ ನೋಡೋಣ.